ಫಾರೆಸ್ಟ್ ಇಲಾಖೆ.

ಇಸ್ತಿಹಾರ್ನಾಮೆ.

ಸ॥ 1903ನೇ ಇಸವಿ ಮೇ 13ನೇ ತಾರೀಖು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಸ॥ 1903ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1904ನೇ ಜೂ॥ ಆಖೈರ್ ವರಿಗೆ ಹನ್ನೆರಡು ತಿಂಗಳ ಪರ್ಯಂತರ ಬವರಿಂಗ್ ಪೇಟೆ ತಾಲ್ಲೂಕು ಕಾವುಸಂದ್ರದ ಸ್ಟೇಟ್ ಫಾರೆಸ್ಟ್ ಕುಂದರಸನ ಹಳ್ಳಿ ಮತ್ತು ಮುತ್ತನಹಳ್ಳಿ ಟೋಲ್ ಗೇಟಿನಲ್ಲಿ ಟೋಲ್ ವಸೂಲ್ಮಾಡತಕ್ಕ ಹಕ್ಕು 1903ನೇ ಇಸವಿ ಜೂ॥ 22ನೇ ತಾರೀಖಿನ ದಿವಸ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಾಗಲಿ ಅಥವಾ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರ್ರಿಂದಾಗಲೀ ಬಹಿರಂಗವಾಗಿ ಹರಾಜು ಮಾಡಿ ಕೊಡುತ್ತೆ.

(2) ಚಡಸವಾಲನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಬಳಪಟ್ಟು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್‌ವರು ಅಂಗೀಕರಿಸುತ್ತಾರೆ. ಯಾವ ಸವಾಲನ್ನಾಗಲೀ ಮಂಜೂರ್ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್‌ವರ ಯಕ್ತ್ಯಾರಿಯಲ್ಲಿರುತ್ತೆ.

(3) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್‌ವರು ಯಾವ ಸವಾಲುಗಳು ಅಂಗೀಕರಿಸುತ್ತಾರೋ ಅಂಥಾವರು ಸವಾಲ್ ಮೊಬಲಗು ಪೈಕಿ ಕಾಲು ಭಾಗದ ಮೊಬಲಗು ತಕ್ಷಣ ಡಿಪಾಜಿಟ್ ಇಡಬೇಕು. ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಹರಾಜು ಮಂಜೂರಾದ ಸಂಗತಿ ತಿಳಿಸಿದ ಬಂದು ವಾರದೊಳಗಾಗಿ ಬಾಕಿ ಇರತಕ್ಕ ಮೊಬಲಗು ಪೂರ್ತಿ ಪಾವತೀ ಮಾಡಬೇಕು. ಈ ಪರತ್ತುಗಳಿಗೆ ತಪ್ಪಿದರೆ ಡಿಪಾಜಿಟ್ ಇಟ್ಟರತಕ್ಕ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಂಡು ಕಂಟ್ರಾಕ್ಟನ್ನು ದುಸರಾ ಹರಾಜು ಮಾಡಿಸುವದಲ್ಲದೆ ಇದರಲ್ಲಿ ಉಂಟಾಗುವ ಯಾವ ಫಾಯಿದೆಗೂ ಮೊದಲಿನ ಸವಾಲ್‌ದಾರನಿಗೆ ಹಕ್ಕು ಇರುವದಿಲ್ಲ. ಮತ್ತು ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಇವನನ್ನು ಗುರಿಪಡಿಸಿ ಈ ಮೊಬಲಗು ಇವನಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(4) ಈ ಕೆಳಗೆ ಕಂಡ ಪರತ್ತುಗಳು ಕಂಡು ಪರತ್ತಿಗೆ ಬದ್ಧನಾಗಿರುವಂತೆ ಕಂಟ್ರಾಕ್ಟುದಾರನು ಫಾಪಾಕಾಗದದಲ್ಲಿ ಮುಚ್ಚಳಿಕೆಯನ್ನು ಹರಾಜು ಮಂಜೂರಾದ ಬಂದು ವಾರದಲ್ಲಿ ಬರದುಕೊಟ್ಟು ವಿನಹಾ ಟೋಲ್ ವಸೂಲಿಗೆ ಅಪ್ಪಣೆ ದೊರಯಲಾರದು. ಕಂಟ್ರಾಕ್ಟರು ಪ್ರತಿ ದಿನವೂ ವಸೂಲ್ಮಾಡುವ ಮೊಬಲಗಿಗೆ ಬಂದು ಲೆಖ್ಖದ ಬುಕ್ಕು ಇಟ್ಟುರಬೇಕು. ಇದು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಅಧಿಕಾರಿಗಳು ತನಿಖೇ ಮಾಡುವದಕ್ಕೆ ಬಂದಾಗ ಖುಲ್ಲಾ ಇರಬೇಕು.

(5) ಕಂಟ್ರಾಕ್ಟುದಾರನು ಈ ಕೆಳಗೆ ಕಂಡ ಟೋಲ್ ಶಿವಾಯಿ ಮತ್ಯಾವದನ್ನು ವಸೂಲ್ಮಾಡಕೂಡದು. ಮತ್ತು ಅದರಲ್ಲಿ ನಮೂದಿಸುವ ದರದಂತೆಯೇ ವಸೂಲ್ಮಾಡಬೇಕು. ಇದಕ್ಕೆ ವಿರೋಧವಾಗಿ ನಡದರ ಕಂಟ್ರಾಕ್ಟುದಾರನನ್ನು ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಗುರಿಪಡಿಸುವದಲ್ಲದೆ ಕಂಟ್ರಾಕ್ಟು ಸಹ ರದ್ದುಮಾಡಲ್ಪಡುವದು.

(6) ಕಂಟ್ರಾಕ್ಟುದಾರನು ಮೈಸೂರ್ ಸರಹದ್ದು ಹೊರಗಿನಿಂದ ಕಾವುಸಂದ್ರ ಸ್ಟೇಟ್ ಫಾರೆಸ್ಟ್ ಮಾರ್ಗವಾಗಿ ಬರತಕ್ಕ ಸಾಮಾನು ಭರ್ತಿ ಭಂಡಿಗೆ ಮಾತ್ರ ಟೋಲ್ ವಸೂಲ್ಮಾಡಬೇಕು.

(7) ಕಂಟ್ರಾಕ್ಟುದಾರನು (1) ಕುಂದರಸನಹಳ್ಳಿ, (2) ಮುತ್ತನಹಳ್ಳಿ ಈ ಎರಡು ಟೋಲ್ ಗೇಟಿನಲ್ಲಿ ಶಿವಾಯಿ ಇತರ ಸ್ಥಳದಲ್ಲಿ ಟೋಲ್ ವಸೂಲ್ಮಾಡಕೂಡದು.

(8) ಇನ್ನೇನಾದರೂ ತಪಶೀಲು ಬೇಕಾದರೆ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಗೆ ಬರದುಕೊಂಡು ತಿಳಿದುಕೊಳ್ಳಬಹುದು. ಪ್ರತಿಯೊಂದು ಸಾಮಾನು ಭರ್ತಿ ಭಂಡಿಗೂ ಭಂಡಿ 1ಕ್ಕೆ ಎರಡಾಣೆಯಂತೆ ಕುಂದರಸನಹಳ್ಳಿ ಮತ್ತು ಮುತ್ತನಹಳ್ಳಿ ಟೋಲ್ ಗೇಟಿನಲ್ಲಿ ಟೋಲ್ ವಸೂಲ್ ಮಾಡಲ್ಪಡಬೇಕು.

ಇಸ್ತಿಹಾರ್, ತಾರೀಖು 23ನೇ ಮೇ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬವರಿಂಗ್‌ಪ್ಯಾಟೆ ತಾಲ್ಲೂಕಿನಲ್ಲಿರುವ ಕಾವುಸಂದ್ರದ ಸ್ಟೇಟ್ ಫಾರೆಸ್ಟು ಪೈಕಿ ಈ ಕೆಳಗೆ ಕಂಡ ತಾಕುಗಳಲ್ಲಿರುವ ಮರಗಳನ್ನು ಈ ಇಸ್ತಿಹಾರ್‌ನಲ್ಲಿ ಕಂಡ ಪರತ್ತುಗಳಿಗೆ ಬಳಪಟ್ಟು 1903ನೇ ಇಸವಿ ಜುಲೈ 15ರ ಲಾಗಾಯಿತು 1904ನೇ ಇಸವಿ ಜೂ॥ ಆಖೈರು ವರಿಗೆ ಕಡದುಸಾಗಿಸಿಕೊಂಡು ಹೋಗತಕ್ಕ ಹಕ್ಕನ್ನು 1903ನೇ ಇಸವಿ 24ನೇ ಜೂ॥ ತಾರೀಖು ಬುಧವಾರ ಮಧ್ಯಾಹ್ನ 2 ಘಂಟೆಗೆ ಡೆಪ್ಯುಟಿ ಕಮಿಷನರವರೊಂದಿಗಾಗಲಿ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರೊಂದಿಗಾಗಲಿ ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಬವರಿಂಗ್‌ಪ್ಯಾಟೆ ಮೊಕ್ಕಾಮಿನಲ್ಲಿ ಹರಾಜು ಮಾಡುವರು.

ಬ್ಲಾಕ್ ನಂಬರು.	ತಾಕು ನಂಬರು.	ಸರ್ವೆ ನಂಬರುಗಳು ಸೇರಿದ್ದು.	ಮುಖ್ಯವಾದ ಮರಗಳ ಜಾತಿ.	ಪರಾ.
I III	4 4	363 476	ಬಿಗರೆ ಅಥವಾ ಜುಜ್ಜಲು, ನಲ್ಲಬಲಸು, ದೇವದಾರಿ, ಗೊರವಿ, ಫಲ್ವರೇಣಿ ವಗೈರೆ.	1ನೇ ಬ್ಲಾಕಿನ ಮೊದಲು ನಾಲ್ಕು ಕೂಪುಗಳು ಮತ್ತು 3ನೇ ಬ್ಲಾಕಿನ ಮೊದಲು ನಾಲ್ಕು ಕೂಪುಗಳು ಶಿವಾಯಿ ಬಾಕಿ ಸ್ಟೇಟ್ ಫಾರೆಸ್ಟುನಲ್ಲಿರತಕ್ಕ ವಿಶಿಷ್ಟ ಪಣಸಾಡೆಯನ್ನು ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ಮೇಲ್ಕಂಡ ತಾಕುಗಳು ಪ್ರತ್ಯೇಕವಾಗಿಯಾಗಲಿ ಬಟ್ಟಾಗಿಯಾಗಲಿ ಅಥವಾ ಎಕರೆ 1ಕ್ಕೆ ಇಷ್ಟು ಮೊಬಲಗಿಗೆಂದಾಗಲಿ ಹರಾಜು ಮಾಡುವಂಥ ಆಫಿಸರಿಗೆ ಸೂಕ್ತ ಕಂಡುಬರುವ ರೀತಿಯಲ್ಲಿ ಹರಾಜು ಮಾಡಲ್ಪಡುವದು. ಈ ಹರಾಜು ಕರ್ನಲ್ ರೇವೆಟರ್ ಸಾಹೇಬರವರ ಮಂಜೂರಾತಿಗೆ ಬಳಪಟ್ಟಿರುತ್ತೆ.

ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೊ ಅಂಥ ತಮ್ಮಾಂ ಹಕ್ಕುಗಳು ರದ್ದಾಗುವದಲ್ಲದೆ, ಆನಂತರ ಬರುವ ಯಾವ ಮನಿನೆಯೂ, ತಕರಾರೂ ಅಂಗೀಕರಿಸಲ್ಪಡುವದಿಲ್ಲವು.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ಇ ಗ್ರಾಮ.	ಸುವಾಸರು ವಿಸ್ತೀರ್ಣ.	ಬ್ಯಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ತಿನಸೊಗ್ಗಾ.	ಸಾಗರ.	15 ಚದರ ಮೈಲಿಗಳು.	ಜೋಗ ಘಾರೆಸ್ಟು.	ಸ್ಥಳ.—ಪಶ್ಚಿಮ ಘಾಟಿಯಲ್ಲಿ ಪರಾವತಿ ನದಿಯಿಂದಲೂ ಮತ್ತು ಉತ್ತರ ಕನ್ನಡಾ ಎಲ್ಲೆಯಿಂದಲೂ ಉಂಟಾದ ಮೂಲೆಯಲ್ಲಿರುವ ಎರಡು ಬ್ಲಾಕುಗಳು ವೈಳ್ಳ ಜಂಗಲಿನ ತುಂಡು. ಚಕ್ಕುಬಂದಿ. A. ಬ್ಲಾಕು. ಉತ್ತರಕ್ಕೆ.—ಪರಾವತಿ ನದಿ. ಪೂರ್ವಕ್ಕೆ.—ಕರಗಲ್ ಗ್ರಾಮದ ಸರ್ವೆ ನಂ. 2. ದಕ್ಷಿಣಕ್ಕೆ.—ಕರಗಲ್‌ದ ಸರ್ವೆ ನಂ. 2ರ ಅಂಚಿನಲ್ಲಿರುವ A. ಎಂಬ ಕಲ್ಲುಪ್ಪೆಯಿಂದ ಹೊರಟು ಎಲ್ಲೆಯು ವಾಯುವ್ಯದಿಕ್ಕಾಗಿ ನೆಟ್ಟಗೆ ಕರಗಲದ ಸರ್ವೆ ನಂ. 16ರ ಮಧ್ಯೆ ಕರಗಲದ ಸರ್ವೆ ನಂ. 16 ಮತ್ತು ತಲಕಳಲೆಯ ಸರ್ವೆ ನಂ. 61 ವ 62 ಇವುಗಳ ಬಹುತ್ವದ ಬಾಂದಿಗೆ ಹೋಗುತ್ತದೆ. ಆಖ್ಯೈರು ಸ್ಥಳದಿಂದ ಲೈನು ದಕ್ಷಿಣಕ್ಕೆ ತಿರುಗಿ ನೆಟ್ಟಗೆ ತಲಕಳಲೆಯ ಸರ್ವೆ ನಂ. 61ರ ಮಧ್ಯೆ ಸದರೀ ಗ್ರಾಮದ ಸರ್ವೆ ನಂ. 63ರ ವಾಯವ್ಯ ಬಾಂದಿಗೆ ಹೋಗುತ್ತದೆ. ಮೇಲ್ಕಂಡ ಸ್ಥಳದಿಂದ ಲೈನು ಸರ್ವೆ ನಂ. 63ರ ಪಶ್ಚಿಮ ಅಂಚಿನ ಉದ್ದಕ್ಕೂ ಹೋಗುತ್ತದೆ. ಆಮೇಲೆ ಆಖ್ಯೈರ ಸರ್ವೆ ನಂಬರಿನಲ್ಲಿ ಸೇರುವ ಕಾಲುಹಾದಿಯನ್ನು ಅನುಸರಿಸಿ ಹೋಗಿ ಲೈನು B ಎಂಬ ಕಲ್ಲುಪ್ಪೆಯಲ್ಲಿ ಸರ್ವೆ ನಂ. 61 ವ 116 ಇವುಗಳ ಮಧ್ಯೆ ಇರುವ ಎಲ್ಲೆಯನ್ನು ಮುಟ್ಟುತ್ತದೆ. ಆಖ್ಯೈರ ಸ್ಥಳದಿಂದ ಲೈನು ಸರ್ವೆ ನಂ. 61 ವ 60 ಇವುಗಳ ದಕ್ಷಿಣ ಅಂಚಿನ ಉದ್ದಕ್ಕೂ ಹೋಗುತ್ತದೆ. ಪಶ್ಚಿಮಕ್ಕೆ.—ಉತ್ತರ ಕನ್ನಡಾವಿನ ಸೂಲಿಮನೆ ಗ್ರಾಮ. B. ಬ್ಲಾಕು. ಉತ್ತರಕ್ಕೆ.—ತಲಕಳಲೆಯ ಸರ್ವೆ ನಂ. 60ರ ಪಶ್ಚಿಮ ಭಾಗ. ಪೂರ್ವಕ್ಕೆ.—ಎಲ್ಲೆಯು ತಲಕಳಲೆಯ ಸರ್ವೆ ನಂ. 24, 25, 33 ವ 11 ಇವುಗಳ ಬಹುತ್ವದ ಬಾಂದನ್ನು ಮುಟ್ಟುವ ವರಿವಿಗೆ ಸರ್ವೆ ನಂ. 26ರ ಆಮೇಲೆ 25ರ ಪೂರ್ವ ಅಂಚನ್ನು ಅನುಸರಿಸಿ ಹೋಗುತ್ತದೆ. ಆಖ್ಯೈರು ಸ್ಥಳದಿಂದ ಲೈನು ದಕ್ಷಿಣಕ್ಕೆ ನೆಟ್ಟಗೆ ಸರ್ವೆ ನಂ. 24 ವ 132 ಇವುಗಳ ಮಧ್ಯೆ ತಲಕಳಲೆಯ ಸರ್ವೆ ನಂ. 132, 130, ವ 126 ಇವುಗಳ ಬಹುತ್ವದ ಬಾಂದಿಗೆ ಹೋಗುತ್ತದೆ. ದಕ್ಷಿಣಕ್ಕೆ.—ಎಲ್ಲೆ ಲೈನು ಉತ್ತರ ಕನ್ನಡ ಎಲ್ಲೆಯನ್ನು ಮುಟ್ಟುವವರಿವಿಗೆ ಸರ್ವೆ ನಂ. 126 ವ 125 ಇವುಗಳೊಡನೆ ಸರ್ವೆ ನಂ. 132 ನೇರತಕ್ಕ ಸ್ಥಳದ ಉದ್ದಕ್ಕೂ ವಕ್ರಾಕಾರವಾಗಿ ಹೋಗುತ್ತದೆ. ಪಶ್ಚಿಮಕ್ಕೆ.—ಉತ್ತರ ಕನ್ನಡಾ ಎಲ್ಲೆ.

ಸಿ. ಎಸ್. ಬಾಲಸುಂದರಂ ಅಯ್ಯರ್,
ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ್, ಸಾಗರ ಸಬ್‌ಡಿವೀಜ್ಞ.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮಾಗಡೀ ತಾಲ್ಲೂಕು ತಿಪ್ಪಸಂದ್ರದ ಹೋಬಳಿ ಜೋಡಿ ಹಳ್ಳಿ ಗ್ರಾಮವು ಸ॥ 1903ನೇ ಇಸವಿ ಜೂ॥ 15ನೇ ತಾರೀಖಿನಲ್ಲಿ ಮಾಗಡಿ ತಾಲ್ಲೂಕು ಕಚೇರಿ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1903ನೇ ಇಸವಿ ಮೇ ತಿಂಗಳು 21ನೇ ತಾರೀಖು ಮೈಸೂರು ಗೆಜೆಟ್ 2ನೇ ಭಾಗದ 228ನೇ ಪೇಜಿನಲ್ಲಿ ಘಾಯಿಷ್ ಆಗಿಇದೆ.